ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ"

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮದ ಸರ್ವೆ ನಂ. 158/1 ರಲ್ಲಿ 1ಎ-26ಗು, 158/2 ರಲ್ಲಿ 3ಎ-11ಗು, 159/1 ರಲ್ಲಿ 3ಎ-00ಗು, 159/2 ರಲ್ಲಿ 2ಎ-17ಗು, 198 ರಲ್ಲಿ 00-05ಗು, 199 ರಲ್ಲಿ 1ಎ-15ಗು, 207 ರಲ್ಲಿ 1ಎ-06ಗು, 209 ರಲ್ಲಿ 1ಎ-08ಗು, 210 ರಲ್ಲಿ 1ಎ-06ಗು, 211 ರಲ್ಲಿ 1ಎ-02ಗು, 212 ರಲ್ಲಿ 1ಎ-06ಗು, 213 ರಲ್ಲಿ 1ಎ-06ಗು, 214 ರಲ್ಲಿ 00-26ಗು, 215 ರಲ್ಲಿ 2ಎ-34ಗು, 216 ರಲ್ಲಿ 1ಎ-28ಗು, 218 ರಲ್ಲಿ 00-15ಗು, 219 ರಲ್ಲಿ 00-25ಗು, 220 ರಲ್ಲಿ 00-27ಗು ಮತ್ತು 221 ರಲ್ಲಿ 1ಎ-23ಗು ಒಟ್ಟು 27ಎಕರೆ 06ಗುಂಟೆ ಅಥವಾ 109870.62 ಚ.ಮೀ. ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**

1) ಶ್ರೀಮತಿ ವೀಣಾ ಹಸ್ಮುಖ್ ಷಾ ಕೋಂ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ, ಶ್ರೀ ತೇಜೇಶ್ ಹಸ್ಮುಖ್ ಷಾ ಬಿನ್ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ, ಕು. ಪಾಯಲ್ ಹಸ್ಮುಖ್ ಷಾ ಬಿನ್ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ, ಶ್ರೀ ರೋನಕ್ ಭರತ್ ಷಾ ಬಿನ್ ಲೇಟ್॥ ಭರತ್ ಪ್ರೇಮ್‌ಚಂದ್‌ಷಾ, ಶ್ರೀ ಆಶೀಲ್ ಭರತ್ ಷಾ ಬಿನ್ ಲೇಟ್॥ ಭರತ್ ಪ್ರೇಮ್‌ಚಂದ್‌ಷಾ ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರಾದ ಮೆ॥ ಕೆಎನ್‌ಎಸ್ ಈಕ್ವಿಟಿ ಎಸ್ಟೇಟ್ಸ್ ಎಲ್‌ಎಲ್‌ಪಿ ಹಾಗೂ ವಿನಯ್ ಮೃತ್ಯುಂಜಯ ಬಿನ್ ಬಿನ್ ಲೇಟ್॥ ಎಂ.ಸಿ. ಮೃತ್ಯುಂಜಯ ಮೆ॥ ರೀವೈಲ್ಡ್ ಲೈಫ್ ಎಲ್‌ಎಲ್‌ಪಿ ಪರವಾಗಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಆದರ್ಶ್ ನರಹರಿ ಬಿನ್ ಬಿ.ಎಸ್.ಎನ್ ಹರಿ ರವರುಗಳು ಸಲ್ಲಿಸಿರುವ ಅರ್ಜಿ ದಿನಾಂಕ: 12/03/2024.
2) ಸರ್ಕಾರದ ಆದೇಶ ಸಂ. ನಅಇ 101 ಬಿಎಂಆರ್ 2024 ಬೆಂಗಳೂರು, ದಿ:14/03/2024.
3) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: ಎಎಲ್‌ಎನ್ (ದೊ) ಎಸ್.ಆರ್/69/2005-06 ದಿನಾಂಕ:28-06-2005 [ಸ.ನಂ. 158 (158/1), 159 (159/1, 159/2), 212], ಎಎಲ್‌ಎನ್ (ದೊ) ಎಸ್.ಆರ್/67/ 2005-06 ದಿನಾಂಕ: 28-06-2005 [ಸ.ನಂ. 158 (158/2), 211, 215, 198, 210], ಎಎಲ್‌ಎನ್ (ದೊ) ಎಸ್.ಆರ್/68/2005-06 ದಿನಾಂಕ: 28-06-2005 [ಸ.ನಂ. 213, 199, 216], ಎಎಲ್‌ಎನ್ (ದೊ) ಎಸ್.ಆರ್/70/2005-06 ದಿನಾಂಕ: 28-06-2005 [ಸ.ನಂ. 207, 219, 209, 206].
4) ದಿನಾಂಕ:15/03/2024 ರಂದು ನಡೆದ ಪ್ರಾಧಿಕಾರದ 29ನೇ ವಿಶೇಷ ಸಭೆಯ ವಿಷಯ ಸಂ. 29.12 ರ ನಡಾವಳಿ.
5) ಈ ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: 22/03/2024.
6) ಅರ್ಜಿದಾರರ ಮನವಿ ಪತ್ರ ದಿನಾಂಕ: 14/05/2024.
7) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: 650554 ದಿನಾಂಕ: 09-05-2024 [ಸ.ನಂ. 214], 650555 ದಿನಾಂಕ: 09-05-2024 [ಸ.ನಂ. 218], 650556 ದಿನಾಂಕ: 09-05-2024 [ಸ.ನಂ. 220], 650557 ದಿನಾಂಕ: 09-05-2024 [ಸ.ನಂ. 221].
8) ಈ ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 01/06/2024.
9) ಅರ್ಜಿದಾರರ ಮನವಿ ಪತ್ರ ದಿನಾಂಕ: 10/06/2024.
10) ಈ ಪ್ರಾಧಿಕಾರದ ಪರಿಷ್ಕೃತ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 11/06/2024.
11) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 2135 ದಿನಾಂಕ: 14/06/2024 ರಂತೆ ರೂ. 61,70,650/- ಒಟ್ಟು ರೂ. (ಅರವತ್ತೊಂದು ಲಕ್ಷದ ಎಪ್ಪತ್ತು ಸಾವಿರದ ಆರು ನೂರ ಐವತ್ತು ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.

......2



E-mail :dpa.dbpura2018@gmail.com
Website : www.doddaballapur.tpa.gov.in

12) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು ದಿನಾಂಕ: 10/09/2015 ಮತ್ತು ಡಿಪಿಎಲ್ 36 ಶಾಸನ 2021, ಬೆಂಗಳೂರು ದಿನಾಂಕ: 07/10/2021.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ವೀಣಾ ಹಸ್ಮುಖ್ ಷಾ ಕೋಂ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ, ಶ್ರೀ ತೇಜೇಶ್ ಹಸ್ಮುಖ್ ಷಾ ಬಿನ್ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ, ಕು. ಪಾಯಲ್ ಹಸ್ಮುಖ್ ಷಾ ಬಿನ್ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ, ಶ್ರೀ ರೋನಕ್ ಭರತ್ ಷಾ ಬಿನ್ ಲೇಟ್॥ ಭರತ್ ಪ್ರೇಮ್‌ಚಂದ್‌ಷಾ, ಶ್ರೀ ಆಶೀಲ್ ಭರತ್ ಷಾ ಬಿನ್ ಲೇಟ್॥ ಭರತ್ ಪ್ರೇಮ್‌ಚಂದ್‌ಷಾ ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರಾದ ಮೆ॥ ಕೆಎನ್‌ಎಸ್ ಈಕ್ವಿಟಿ ಎಸ್ಟೇಟ್ಸ್ ಎಲ್‌ಎಲ್‌ಪಿ ಹಾಗೂ ವಿನಯ್ ಮೃತ್ಯುಂಜಯ ಬಿನ್ ಬಿನ್ ಲೇಟ್॥ ಎಂ.ಸಿ. ಮೃತ್ಯುಂಜಯ ರವರುಗಳ ಉಲ್ಲೇಖ (1) ರ ಅರ್ಜಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮದ ಸರ್ವೆ ನಂ. 158/1 ರಲ್ಲಿ 1ಎ-26ಗು, 158/2 ರಲ್ಲಿ 3ಎ-11ಗು, 159/1 ರಲ್ಲಿ 3ಎ-00ಗು, 159/2 ರಲ್ಲಿ 2ಎ-17ಗು, 198 ರಲ್ಲಿ 00-05ಗು, 199 ರಲ್ಲಿ 1ಎ-15ಗು, 206 ರಲ್ಲಿ 1ಎ-00ಗು, 207 ರಲ್ಲಿ 1ಎ-06ಗು, 209 ರಲ್ಲಿ 1ಎ-08ಗು, 210 ರಲ್ಲಿ 1ಎ-06ಗು, 211 ರಲ್ಲಿ 1ಎ-02ಗು, 212 ರಲ್ಲಿ 1ಎ-06ಗು, 213 ರಲ್ಲಿ 1ಎ-06ಗು, 214 ರಲ್ಲಿ 00-26ಗು, 215 ರಲ್ಲಿ 2ಎ-34ಗು, 216 ರಲ್ಲಿ 1ಎ-28ಗು, 218 ರಲ್ಲಿ 00-15ಗು, 219 ರಲ್ಲಿ 00-25ಗು, 220 ರಲ್ಲಿ 00-27ಗು ಮತ್ತು 221 ರಲ್ಲಿ 1ಎ-23ಗು ಒಟ್ಟು 28ಎಕರೆ 06ಗುಂಟೆ ಅಥವಾ 113917.42 ಚ.ಮೀ. ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಲಾಗಿದೆ.

ಪ್ರಶ್ನಿತ ಜಮೀನುಗಳು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/95/ಬಿಎಂಆರ್/2016 ದಿನಾಂಕ: 30-11-2017 ರನ್ವಯ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸೇರಲ್ಪಟ್ಟಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/175/ಬಿಎಂಆರ್/2015 ದಿನಾಂಕ: 29-02-2016 ರಲ್ಲಿನ ನಿರ್ದೇಶನದನ್ವಯ ಪ್ರಶ್ನಿತ ಜಮೀನುಗಳ 'ವ್ಯವಸಾಯ' ಭೂಉಪಯೋಗ ವಲಯವೆಂದು ಪರಿಗಣಿಸಲಾಗಿದ್ದು, ಉಲ್ಲೇಖ (2) ರ ಸರ್ಕಾರದ ಆದೇಶದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರಡಿಯಲ್ಲಿ ಪ್ರಸ್ತಾಪಿತ ಜಮೀನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಯಾಗಿರುತ್ತದೆ. ಸರ್ವೆ ನಂ. 214 ರಲ್ಲಿ 00-26ಗು, 218 ರಲ್ಲಿ 00-15ಗು, 220 ರಲ್ಲಿ 00-27ಗು ಮತ್ತು 221 ರಲ್ಲಿ 1ಎ-23ಗು ಒಟ್ಟು 3ಎಕರೆ 11ಗುಂಟೆ ಪ್ರದೇಶವನ್ನು ಹೊರತುಪಡಿಸಿ ಉಳಿಕೆ ಜಮೀನುಗಳು ಉಲ್ಲೇಖ (4) ರ ಅಧಿಕೃತ ಜ್ಞಾಪನ ಪತ್ರಗಳಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ದಿನಾಂಕ: 10/09/2015 ರನ್ವಯ ಕಾಯ್ದೆಗೆ ತಿದ್ದುಪಡಿಯಾಗಿರುವಂತೆ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17(2) (ಎ) ರಂತೆ ಸದರಿ ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (5) ರ ದಿನಾಂಕ: 15/03/2024 ರಂದು ನಡೆದ ಪ್ರಾಧಿಕಾರದ 29ನೇ ಸಭೆಯ ವಿಷಯ ಸಂ. 29.12 ರ ನಡಾವಳಿಯಲ್ಲಿ ಸರ್ವೆ ನಂ. 214, 218, 220 ಮತ್ತು 221 ರ ಜಮೀನುಗಳ ಭೂ ಪರಿವರ್ತನಾ ಆದೇಶ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರಿಂದ CFE ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವ ಷರತ್ತಿಗೊಳಪಟ್ಟು, ಪ್ರಶ್ನಿತ ಜಮೀನುಗಳಲ್ಲಿ ಖರಾಬು ಪ್ರದೇಶಗಳ ಬಗ್ಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದೊಡ್ಡಬಳ್ಳಾಪುರ ತಾಲ್ಲೂಕು ರವರಿಂದ ನಕ್ಷೆಯನ್ನು ದೃಢೀಕರಿಸಿಕೊಂಡ ನಂತರ ಯಥಾವತ್ತಾಗಿ ಖರಾಬು ಪ್ರದೇಶಗಳನ್ನು ವಿನ್ಯಾಸ ನಕ್ಷೆಯಲ್ಲಿ ಕಾಯ್ದಿರಿಸಿ, Utility ಗಳಾದ RWH, Tranformer Yard, STP, SWM, Bus Bay/Shelter ಇತರೆಗಳು....ಅಳವಡಿಸಿ ಅನುಮೋದಿತ ವಲಯ ನಿಯಮಾವಳಿಗಳ ಅನುಸಾರ ಮಾರ್ಪಡಿತ ವಸತಿ ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ ನಂತರ ಸರ್ಕಾರದ ದಿನಾಂಕ: 20-11-2023 ರ ಅಧಿಸೂಚನೆ ಹಾಗೂ ದಿನಾಂಕ: 23-01-2024 ರ ಪ್ರಗತಿ ಪರಿಶೀಲನಾ ಸಭೆಯ ನಡವಳಿಯ ರೀತ್ಯ ಪ್ರಸ್ತಾವನೆ ಸಂಬಂಧ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಪೂರ್ವ ಸಮ್ಮತಿಯನ್ನು ಪಡೆದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮದ ಸರ್ವೆ ನಂ. 158/1 ರಲ್ಲಿ 1ಎ-26ಗು, 158/2 ರಲ್ಲಿ 3ಎ-11ಗು, 159/1 ರಲ್ಲಿ 3ಎ-00ಗು, 159/2 ರಲ್ಲಿ 2ಎ-17ಗು, 198 ರಲ್ಲಿ 00-05ಗು, 199 ರಲ್ಲಿ 1ಎ-15ಗು, 206 ರಲ್ಲಿ 1ಎ-00ಗು, 207 ರಲ್ಲಿ 1ಎ-06ಗು, 209 ರಲ್ಲಿ 1ಎ-08ಗು, 210 ರಲ್ಲಿ 1ಎ-06ಗು, 211 ರಲ್ಲಿ 1ಎ-02ಗು, 212 ರಲ್ಲಿ 1ಎ-06ಗು, 213 ರಲ್ಲಿ 1ಎ-06ಗು, 214 ರಲ್ಲಿ 00-26ಗು, 215 ರಲ್ಲಿ 2ಎ-34ಗು, 216 ರಲ್ಲಿ 1ಎ-28ಗು, 218 ರಲ್ಲಿ 00-15ಗು, 219 ರಲ್ಲಿ 00-25ಗು, 220 ರಲ್ಲಿ 00-27ಗು ಮತ್ತು 221 ರಲ್ಲಿ 1ಎ-23ಗು ಒಟ್ಟು 28ಎಕರೆ 06ಗುಂಟೆ ಅಥವಾ 113917.42 ಚ.ಮೀ. ವಿಸ್ತೀರ್ಣದ ಪ್ರದೇಶಕ್ಕೆ

....3....

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.



ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು "Demarcation & Development" ಉದ್ದೇಶಕ್ಕೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಅನುಮೋದಿಸಲು ತೀರ್ಮಾನಿಸಲಾಯಿತು ಹಾಗೂ ಅರ್ಜಿದಾರರು ವಸತಿ ವಿನ್ಯಾಸದಲ್ಲಿನ ಮೊದಲನೇ ಹಂತದ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಇಚ್ಛಿಸಿದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2) (ಸಿ) ರಡಿಯಲ್ಲಿ ಮೊದಲನೇ ಹಂತದ ಶೇ 40 ರಷ್ಟು ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲು ಸಹ ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆಗೆ ಸಂಬಂಧಿಸಿದಂತೆ, ಉಲ್ಲೇಖ (5) ರ ಪ್ರಾಧಿಕಾರದ ಪತ್ರದಲ್ಲಿ ಪ್ರಸ್ತಾವನೆ ಸಂಬಂಧ ಮುಂದಿನ ಕ್ರಮ ವಹಿಸಲು ಅಗತ್ಯವಿರುವ ಪೂರಕ ಮಾಹಿತಿ/ದಾಖಲೆಗಳನ್ನು ಸಲ್ಲಿಸಲು ಹಿಂಬರಹ ನೀಡಲಾಗಿರುತ್ತದೆ. ಉಲ್ಲೇಖ (6) ರ ಮನವಿ ಪತ್ರದೊಂದಿಗೆ ಅರ್ಜಿದಾರರು ಪ್ರಸ್ತಾಪಿತ ಜಮೀನುಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಪೂರಕ ಮಾಹಿತಿ/ದಾಖಲೆಗಳೊಂದಿಗೆ ಉಲ್ಲೇಖ (7) ರನ್ವಯ ಸರ್ವೆ ನಂ. 214, 218, 220 ಮತ್ತು 221 ರ ಜಮೀನುಗಳಿಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಹೊರಡಿಸಿರುವ ಭೂ ಪರಿವರ್ತನಾ ಆದೇಶಗಳನ್ನು ಸಲ್ಲಿಸಿರುತ್ತಾರೆ ಹಾಗೂ ಶ್ರೀ ವಿನಯ್ ಮೃತ್ಯಂಜಯ ಬಿನ್ ಎಂ.ಸಿ. ಮೃತ್ಯಂಜಯ ರವರು ಸ.ನಂ. 214, 218, 220 ಮತ್ತು 221 ರ ಜಮೀನುಗಳ ಭೂ ಭೂಲೀಕರಾಗಿದ್ದು, ಸದರಿ ಜಮೀನುಗಳನ್ನು ಉಪನೋಂದಣಾಧಿಕಾರಿಗಳು, ದೊಡ್ಡಬಳ್ಳಾಪುರ ತಾಲ್ಲೂಕು ರವರ 1ನೇ ಪುಸ್ತಕದ ದಸ್ತಾವೇಜು ನಂಬರ್ i) DBP-1-00370-2024-25 ದಿನಾಂಕ: 10/04/2024 (ಸ.ನಂ. 214), ii) DBP-1-00371-2024-25 ದಿನಾಂಕ: 10/04/2024 (ಸ.ನಂ. 218), iii) DBP-1-00369-2024-25 ದಿನಾಂಕ: 10/04/2024 (ಸ.ನಂ. 220), iv) DBP-1-00372-2024-25 ದಿನಾಂಕ: 10/04/2024 (ಸ.ನಂ. 221) ಗಳಲ್ಲಿ ನೋಂದಾಯಿಸಲಾಗಿರುವ ಶುದ್ಧ ಕ್ರಯಪತ್ರಗಳನ್ವಯ ಮೆ॥ ಕೆಎನ್‌ಎಸ್ ಈಕ್ವಟಿ ಎಸ್ಟೇಟ್ಸ್ ಎಲ್‌ಎಲ್‌ಪಿ ಆದ ನಮ್ಮ ಹೆಸರಿಗೆ ಖರೀದಿಸಲಾಗಿರುವ ಕಾರಣ ವಿನ್ಯಾಸ ಅನುಮೋದನೆ ಸಂಬಂಧ ಮುಂದಿನ ಪತ್ರ ವ್ಯವಹಾರ ಹಾಗೂ ವಿನ್ಯಾಸ ಅನುಮೋದನೆ ಇತ್ಯಾದಿಗಳನ್ನು ಸದರಿಯವರ ಹೆಸರನ್ನು ನಮೂದಿಸದಿರಲು ಕೋರಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 234 ಬಿಎಂಆರ್ 2023 (ಇ) ದಿನಾಂಕ: 20-11-2023 ರ ಆದೇಶದಂತೆ, ದಿನಾಂಕ: 23-01-2024 ರಂದು ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಮತ್ತು ಜಲ ಸಂಪನ್ಮೂಲ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದ ಸಭೆಯ ನಡವಳಿಯ ಕಂಡಿಕೆ (6) (C) ರಲ್ಲಿ 1ಎಕರೆ ಮೇಲ್ಪಟ್ಟ ವಿಸ್ತೀರ್ಣದ ಪ್ರಸ್ತಾವನೆಗಳಿಗೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರಿಂದ ಪೂರ್ವ ಸಮ್ಮತಿಯನ್ನು ಪಡೆದು ಕ್ರಮವಹಿಸಬೇಕಾಗಿದ್ದು, ದಿನಾಂಕ: 30-05-2024 ರಂದು ಪೂರ್ವ ಸಮ್ಮತಿ ನೀಡಲಾಗಿರುತ್ತದೆ.

ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಿ ಉಲ್ಲೇಖ (8) ರ ಈ ಕಛೇರಿಯ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಲು ಸೂಚಿಸಲಾಗಿರುತ್ತದೆ. ಉಲ್ಲೇಖ (9) ರ ಮನವಿ ಪತ್ರದಲ್ಲಿ ಅರ್ಜಿದಾರರು ಕಾರಣಾಂತರಗಳಿಂದ ಸ.ನಂ. 206 ರಲ್ಲಿ 1-00ಎಕರೆ ವಿಸ್ತೀರ್ಣವನ್ನು ಪ್ರಸ್ತಾವನೆಯಿಂದ ಕೈಬಿಡಬೇಕಾಗಿರುವುದರಿಂದ ಸ.ನಂ. 206 ರಲ್ಲಿನ 1-00 ಎಕರೆ ವಿಸ್ತೀರ್ಣವನ್ನು ಹೊರತುಪಡಿಸಿ, ಉಳಿದ 27ಎಕರೆ 06ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆ ಅನುಮೋದನೆ ನೀಡಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಕೋರಿಕೆಯನ್ವಯ ಉಲ್ಲೇಖ (10) ರ ಈ ಕಛೇರಿಯ ಪರಿಷ್ಕೃತ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ 27ಎಕರೆ 06ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ನಿಗಧಿತ ಶುಲ್ಕಗಳನ್ನು ಪಾವತಿಸಲು ಸೂಚಿಸಲಾಗಿರುವ ಹಿನ್ನೆಲೆಯಲ್ಲಿ ಉಲ್ಲೇಖ (11) ರಂತೆ ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 156 ಬಿಎಂಆರ್ 2018 ದಿನಾಂಕ: 29-09-2018 ರನ್ವಯ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿನ ಅಭಿವೃದ್ಧಿಗಳಿಗೆ ಅನುಮತಿ ನೀಡಲು ಅಳವಡಿಸಿಕೊಳ್ಳಲಾಗಿರುವ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವಲಯ ನಿಯಮಾವಳಿಗಳ ಅನುಸಾರ, ಉಲ್ಲೇಖ (5) ರ ಪ್ರಾಧಿಕಾರದ ಸಭೆಯ ನಡಾವಳಿಯ

....4....



E-mail :dpa.dbpura2018@gmail.com Website : www.doddaballapur.tpa.gov.in

ರೀತ್ಯ ಹಾಗೂ ಅರ್ಜಿದಾರರ ಕೋರಿಕೆಯನ್ವಯ ಸ.ನಂ. 206 ರಲ್ಲಿ 1-00ಎಕರೆ ಪ್ರದೇಶವನ್ನು ಹೊರತುಪಡಿಸಿ ಉಲ್ಲೇಖ (12) ರ ಸರ್ಕಾರದ ಅಧಿಸೂಚನೆಗಳನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮದ ಸರ್ವೆ ನಂ. 158/1 ರಲ್ಲಿ 1ಎ-26ಗು, 158/2 ರಲ್ಲಿ 3ಎ-11ಗು, 159/1 ರಲ್ಲಿ 3ಎ-00ಗು, 159/2 ರಲ್ಲಿ 2ಎ-17ಗು, 198 ರಲ್ಲಿ 00-05ಗು, 199 ರಲ್ಲಿ 1ಎ-15ಗು, 207 ರಲ್ಲಿ 1ಎ-06ಗು, 209 ರಲ್ಲಿ 1ಎ-08ಗು, 210 ರಲ್ಲಿ 1ಎ-06ಗು, 211 ರಲ್ಲಿ 1ಎ-02ಗು, 212 ರಲ್ಲಿ 1ಎ-06ಗು, 213 ರಲ್ಲಿ 1ಎ-06ಗು, 214 ರಲ್ಲಿ 00-26ಗು, 215 ರಲ್ಲಿ 2ಎ-34ಗು, 216 ರಲ್ಲಿ 1ಎ-28ಗು, 218 ರಲ್ಲಿ 00-15ಗು, 219 ರಲ್ಲಿ 00-25ಗು, 220 ರಲ್ಲಿ 00-27ಗು ಮತ್ತು 221 ರಲ್ಲಿ 1ಎ-23ಗು ಒಟ್ಟು 27ಎಕರೆ 06ಗುಂಟೆ ಅಥವಾ 109870.62 ಚ.ಮೀ. ವಿಸ್ತೀರ್ಣದ ಪ್ರದೇಶದ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರನ್ವಯ ವಸತಿ ವಿನ್ಯಾಸ ನಕ್ಷೆಗೆ 'ತಾತ್ಕಾಲಿಕ ಅನುಮೋದನೆ' ನೀಡಲು ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: DPA/TP/LAO/24/2023-24** ದಿನಾಂಕ: 15 JUN 2024

**ಆದೇಶ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2) (ಎ) ರಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವಡ್ಡರಹಳ್ಳಿ ಗ್ರಾಮದ ಸರ್ವೆ ನಂ. 158/1 ರಲ್ಲಿ 1ಎ-26ಗು, 158/2 ರಲ್ಲಿ 3ಎ-11ಗು, 159/1 ರಲ್ಲಿ 3ಎ-00ಗು, 159/2 ರಲ್ಲಿ 2ಎ-17ಗು, 198 ರಲ್ಲಿ 00-05ಗು, 199 ರಲ್ಲಿ 1ಎ-15ಗು, 207 ರಲ್ಲಿ 1ಎ-06ಗು, 209 ರಲ್ಲಿ 1ಎ-08ಗು, 210 ರಲ್ಲಿ 1ಎ-06ಗು, 211 ರಲ್ಲಿ 1ಎ-02ಗು, 212 ರಲ್ಲಿ 1ಎ-06ಗು, 213 ರಲ್ಲಿ 1ಎ-06ಗು, 214 ರಲ್ಲಿ 00-26ಗು, 215 ರಲ್ಲಿ 2ಎ-34ಗು, 216 ರಲ್ಲಿ 1ಎ-28ಗು, 218 ರಲ್ಲಿ 00-15ಗು, 219 ರಲ್ಲಿ 00-25ಗು, 220 ರಲ್ಲಿ 00-27ಗು ಮತ್ತು 221 ರಲ್ಲಿ 1ಎ-23ಗು ಒಟ್ಟು 27ಎಕರೆ 06ಗುಂಟೆ ಅಥವಾ 109870.62 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಮಟ್ಟ ಮಾಡುವುದು, ನೆಲಗಟ್ಟಿ ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲುಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಗಳನ್ನೊಳಗೊಂಡಂತೆ ನಿವೇಶನಗಳು ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಲಾ ಪ್ರದೇಶ ಮಳೆನೀರು ಸಂಗ್ರಹಣೆ ಘಟಕ (Rain water Harvesting), Sewage Treatment Plant (ಘನತ್ಯಾಜ್ಯ ನೀರು ಸಂಸ್ಕರಣಾ ಘಟಕ), ಸೋಕ್‌ಪಿಟ್ ಮತ್ತು ಯಾವುದೇ ಇತರೆ ಮೂಲ ಸೌಕರ್ಯವನ್ನು ತೋರಿಸಿ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, ವಸತಿ ವಿನ್ಯಾಸ ನಕ್ಷೆಗೆ "ತಾತ್ಕಾಲಿಕ ಅನುಮೋದನೆ" ನೀಡಲಾಗಿದೆ.

**ಷರತ್ತುಗಳು**

1) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ 03 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2) ಪ್ರಾಧಿಕಾರಕ್ಕೆ ಸಮಾಧಾನವಾಗುವಂತೆ ಜಮೀನನ್ನು ಮಟ್ಟ ಮಾಡುವುದು, ನೆಲಗಟ್ಟು ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲು ಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಯನ್ನೊಳಗೊಂಡಂತೆ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶ ಮತ್ತು ಯಾವುದೇ ಇತರ ಮೂಲ ಸೌಕರ್ಯವನ್ನು ತೋರಿಸಿ, ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಅನುಸಾರವಾಗಿ ತಾತ್ಕಾಲಿಕ ಬಡಾವಣೆ ನಕ್ಷೆಗೆ ಮಂಜೂರಾತಿಯನ್ನು ನೀಡಲಾಗಿದೆ.
3) ವಿನ್ಯಾಸದಲ್ಲಿನ ನಿವೇಶನಗಳ ಬಿಡುಗಡೆ ಪೂರ್ವದಲ್ಲಿ ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ರವರಿಂದ ಪ್ರಶ್ನಿತ ಜಮೀನುಗಳ ಕುರಿತು ವ್ಯಾಜ್ಯ/ಪ್ರಕರಣ/ತಕರಾರುಗಳು ಇಲ್ಲದಿರುವ ಬಗ್ಗೆ ಮಾಹಿತಿ ಪಡೆದು ಸಲ್ಲಿಸತಕ್ಕದ್ದು.
4) ತಾತ್ಕಾಲಿಕ ಅನುಮೋದನೆ ಆಗಿರುವ ವಸತಿ ವಿನ್ಯಾಸ ನಕ್ಷೆಯ ರೀತ್ಯ ಮಾಲೀಕನು ಯಾವುದೇ ಪರಿಹಾರವನ್ನು ಕ್ಲೇಮು ಮಾಡದೆಯೇ ಉಚಿತವಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಸಾರ್ವಜನಿಕ ಉಪಯೋಗದ ರಸ್ತೆಗಳನ್ನು, ಉದ್ಯಾನಗಳನ್ನು ಹಸ್ತಾಂತರಿಸತಕ್ಕದ್ದು. ಹಾಗೂ ಫೆನ್ಸಿಂಗ್ ಅಳವಡಿಸಿ ಸಂರಕ್ಷಿಸತಕ್ಕದ್ದು.
5) ತಾತ್ಕಾಲಿಕ ಅನುಮೋದನೆ ಆಗಿರುವ ವಸತಿ ವಿನ್ಯಾಸ ನಕ್ಷೆಯ ರೀತ್ಯ ಮಾಲೀಕನು ಯಾವುದೇ ಪರಿಹಾರವನ್ನು ಕ್ಲೇಮು ಮಾಡದೆಯೇ ಉಚಿತವಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಪ್ರಾಧಿಕಾರಕ್ಕೆ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಸ್ತಾಂತರಿಸತಕ್ಕದ್ದು, ನಾಮಫಲಕ ಹಾಗೂ ಫೆನ್ಸಿಂಗ್ ಅಳವಡಿಸಿ ಸಂರಕ್ಷಿಸತಕ್ಕದ್ದು.

....5....

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.



6) ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ, ಮೇಲೆ ಹೇಳಲಾದ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ ಮಂಡಳಿ/ ಇಲಾಖೆಯಿಂದ ಕಾರ್ಯಪೂರ್ತಿ ಪ್ರಮಾಣ ಪತ್ರವನ್ನು ಪಡೆದು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ರಸ್ತೆಗಳು, ಉದ್ಯಾನಗಳನ್ನು ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

7) ವಿನ್ಯಾಸದಲ್ಲಿನ ನಿವೇಶನಗಳ ಬಿಡುಗಡೆ ಪೂರ್ವದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರಿಂದ Consent for Establishment (CFE) ಪಡೆದು ಸಲ್ಲಿಸುವ ಷರತ್ತಿಗೊಳಪಟ್ಟಿದೆ.

8) ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ 03 ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

9) ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ನಿವೇಶನಗಳಲ್ಲಿ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಅಥವಾ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ನೀಡತಕ್ಕದ್ದಲ್ಲ.

10) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

11) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ Water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು Consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ / ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ Consent for Establishment ಅನುಮತಿ ಪಡೆಯತಕ್ಕದ್ದು.

12) ಪ್ರಸ್ತಾವಿತ ಬಡಾವಣೆಯಲ್ಲಿನ ನಿವೇಶನದಾರರಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ಬಡಾವಣೆಯ ಮಾಲೀಕರು ಒದಗಿಸತಕ್ಕದ್ದು.

13) ಪ್ರಶ್ನಿತ ಜಮೀನಿನಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

14) ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

15) ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.

16) ಸದರಿ ವಸತಿ ವಿನ್ಯಾಸದಲ್ಲಿನ ನಿವೇಶನಗಳನ್ನು ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಯನ್ನು ಮಾಡಬಾರದು.

....6....



E-mail :dpa.dbpura2018@gmail.com

Website : www.doddaballapur.tpa.gov.in

17) ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು.

18) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆ, ರಸ್ತೆಬದಿ ಚರಂಡಿ, ಕಲ್‌ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

19) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

20) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧಿಕರಣ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

21) ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

22) ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

23) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಗಿಡ/ಮರಗಳನ್ನು ಬೆಳೆಸುವುದು.

24) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

25) ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

26) ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

27) ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ವಿನ್ಯಾಸಕ್ಕೆ ನೀಡಿರುವ ತಾತ್ಕಾಲಿಕ ಅನುಮೋದನೆ ತಂತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

28) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

29) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು. ಸದರಿ ವಸತಿ ವಿನ್ಯಾಸ ನಕ್ಷೆಯಲ್ಲಿ ಸೂಚಿಸಲಾಗಿರುವ ನಾಲಾ ಪ್ರದೇಶಗಳಲ್ಲಿ ರಸ್ತೆ ಪರಿಚಲನೆಯನ್ನು ಮುಂದುವರಿಸುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು ಕಲ್ವರ್ಟ್ ಕಟ್ಟತಕ್ಕದ್ದು, ಹಾಗೂ ನೀರಿನ ಹರಿವಿಗೆ ಯಾವುದೇ ಅಡಚಣೆ ಮಾಡತಕ್ಕದ್ದಲ್ಲ, ಹಾಗೂ ಸೂಕ್ತ ಡ್ರೈನೇಜ್ ನಿರ್ಮಿಸಿ ಸಂರಕ್ಷಿಸತಕ್ಕದ್ದು, ಹಾಗೂ ಯಾವುದೇ ಒತ್ತುವರಿ ಮಾಡತ್ತಕ್ಕದ್ದಲ್ಲ. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15ಟಿಟಿಪಿ2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ Water pumping stations, Walking tracks, Play fields without any building constructions, cycling tracks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

30) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31.03.2017 ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

31) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಚಿಸಿರುವ Direction under section 18(1) (b) of Water (Prevention & Control of Pollution) Act, 1974ರ ಕಾಯ್ದೆಯಲ್ಲಿ ರೂಪಿಸಿರುವ ನಿಯಮದಂತೆ ಕ್ರಮ ಕೈಗೊಳ್ಳಲು ಸೂಚಿರುವಂತೆ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

   i. ರಾಜ ಕಾಲುವೆಯನ್ನು ಮುಚ್ಚದಂತೆ ಕ್ರಮವಹಿಸುವುದು.

....7....

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.



ii. ರಾಜಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ಕ್ರಮವಹಿಸುವುದು.

iii. ಕಂದಾಯ ಇಲಾಖೆಯ ದಾಖಲೆಗಳಂತೆ ಇರುವ ರಾಜ ಕಾಲುವೆಗಳ ಅಳತೆಗಳನ್ನು ಅತಿಕ್ರಮ/ ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯಲು ಬೇಕಾದ ಕ್ರಮವಹಿಸುವುದು.

iv. ರಾಜ ಕಾಲುವೆಗಳು Silt ಆಗದಂತೆ ಹಾಗೂ ತೆರೆದ ಸ್ಥಿತಿಯಲ್ಲಿ ಸ್ವಚ್ಛವಾಗಿರುವಂತೆ ಕ್ರಮವಹಿಸುವುದು.

32) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಅರ್ಜಿದಾರರು ವಿನ್ಯಾಸದಲ್ಲಿನ ಕಾಮಗಾರಿಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಿದ ನಂತರ, ಸದರಿ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯುವ ಪೂರ್ವದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ವಿವಿಧ ಇಲಾಖೆಗಳಿಂದ ಅಂದರೆ ನೀರು ಸರಬರಾಜು, ಒಳಚರಂಡಿ ಅಭಿವೃದ್ಧಿಪಡಿಸಿರುವ ಬಗ್ಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ, ರಸ್ತೆ ಕಾಮಗಾರಿಗಳು, ಮಳೆನೀರು ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಯಿಂದ, ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ಬೆಸ್ಕಾಂನಿಂದ, ಉದ್ಯಾನವನ/ ಬಯಲುಜಾಗ ಅಭಿವೃದ್ಧಿಪಡಿಸಿರುವ ಬಗ್ಗೆ ತೋಟಗಾರಿಕೆ ಇಲಾಖೆಯಿಂದ, ಹಾಗೂ Sewage Treatment Plant (ತ್ಯಾಜ್ಯ ನೀರು ಸಂಸ್ಕರಣಾ ಘಟಕ) ಸ್ಥಾಪಿಸಿರುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಪಡೆದ Consent for operation ಪತ್ರ ಮತ್ತು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಪ್ರಮಾಣ ಪತ್ರ ಹಾಗೂ ವಿನ್ಯಾಸದಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸಾರ್ವಜನಿಕ ಪ್ರದೇಶಗಳ ನಿರ್ವಹಣೆ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಸಲ್ಲಿಸಿ, ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನಗಳ ಬಿಡುಗಡೆಗೆ ಮನವಿ ಸಲ್ಲಿಸತಕ್ಕದ್ದು.

**ಲಗತ್ತು:-**
ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ
ಕೈಗೊಳ್ಳಲು ಮಾತ್ರ ನೀಡಲಾಗಿರುವ ತಾತ್ಕಾಲಿಕ
ವಸತಿ ವಿನ್ಯಾಸ ನಕ್ಷೆ.

15/06/24

**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

15.06.24 15/6

**ರವರಿಗೆ,**
ಶ್ರೀಮತಿ ವೀಣಾ ಹಸ್ಮುಖ್ ಷಾ ಕೋಂ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ,
ಶ್ರೀ ತೇಜೇಶ್ ಹಸ್ಮುಖ್ ಷಾ ಬಿನ್ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ,
ಕು. ಪಾಯಲ್ ಹಸ್ಮುಖ್ ಷಾ ಬಿನ್ ಲೇಟ್॥ ಹಸ್ಮುಖ್ ಪ್ರೇಮ್‌ಚಂದ್ ಷಾ,
ಶ್ರೀ ರೋನಕ್ ಭರತ್ ಷಾ ಬಿನ್ ಲೇಟ್॥ ಭರತ್ ಪ್ರೇಮ್‌ಚಂದ್‌ಷಾ,
ಶ್ರೀ ಆಶೀಲ್ ಭರತ್ ಷಾ ಬಿನ್ ಲೇಟ್॥ ಭರತ್ ಪ್ರೇಮ್‌ಚಂದ್‌ಷಾ
ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು
ಹಾಗೂ ಭೂ ಮಾಲೀಕರಾದ ಮೆ॥ ಕೆಎನ್‌ಎಸ್ ಈಕ್ವಿಟಿ ಎಸ್ಟೇಟ್ಸ್ ಎಲ್‌ಎಲ್‌ಪಿ
ನಂ. 1125/12, 1ನೇ ಮಹಡಿ, ಸರ್ವಿಸ್ ರಸ್ತೆ,
ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು 560104.



E-mail :dpa.dbpura2018@gmail.com Website : www.doddaballapur.tpa.gov.in